"ಮಧುರ ಮಕ್ಕಳೇ - ಈ ಶರೀರವು ರಾವಣನ ಆಸ್ತಿಯಾಗಿದೆ. ಇದನ್ನು ರಾವಣನಿಗೆ ಕೊಟ್ಟು ಅಶರೀರಿಯಾಗಿ ಮನೆಗೆ ಹೋಗಬೇಕು. ಆದ್ದರಿಂದ ಇದರಿಂದ ಮಮತ್ವವನ್ನು ತೆಗೆದು ಹಾಕಿ"

ಪ್ರಶ್ನೆ: ಇಡೀ ವಿಶ್ವಕ್ಕೆ ಶಾಂತಿ ಮತ್ತು ಸುಖದ ದಾನವನ್ನು ಕೊಡುವಂತಹ ವಿಧಿ ಯಾವುದು?

ಉತ್ತರ: ಬೆಳಗ್ಗೆ-ಬೆಳಗ್ಗೆ ಎದ್ದು ಅಶರೀರಿಯಾಗಿ ತಂದೆಯ ನೆನಪಿನಲ್ಲಿ ಕುಳಿತುಕೊಳ್ಳುವುದೇ ವಿಶ್ವಕ್ಕೆ ಶಾಂತಿಯ ದಾನವನ್ನು ಕೊಡುವಂತಹ ವಿಧಿಯಾಗಿದೆ ಮತ್ತು ಸ್ವದರ್ಶನ ಚಕ್ರವನ್ನು ತಿರಿಗಿಸುವುದು -ಸುಖದ ದಾನ ಕೊಡುವಂತಹ ವಿಧಿಯಾಗಿದೆ. ಜ್ಞಾನ ಮತ್ತು ಯೋಗದಿಂದಲೇ ನೀವು ಎವರ್ ಹೆಲ್ದೀ ವೆಲ್ದೀ (ಸದಾಕಾಲದ ಆರೋಗ್ಯವಂತರು ಐಶ್ವರ್ಯವಂತರು) ಆಗುವಿರಿ. ಸೃಷ್ಟಿ ಹೊಸದಾಗುತ್ತದೆ.

ಗೀತೆ: ನನ್ನನ್ನು ನಿನ್ನ ಶರಣಲ್ಲಿ ತೆಗೆದಿಕೋ ರಾಮ.........

ಓಂ ಶಾಂತಿ. ಇದನ್ನೇ ಆಂಗ್ಲ ಭಾಷೆಯಲ್ಲಿ "ಐಸ್ಲಂ"ಲ್ಲಿ ತೆಗೆದಿಕೋ ಎಂದು, ಹಿಂದಿಯಲ್ಲಿ ಶರಣಾಗತಿಯಲ್ಲಿ ತೆಗೆದಿಕೋ ಎಂದು ಭಕ್ತರು ಹಾಡುತ್ತಾರೆ. ಇದನ್ನು ಭಕ್ತರು ಭಕ್ತಿಮಾರ್ಗದಲ್ಲಿ ಹೇ ರಾಮ ನಿನ್ನ ಆಶ್ರಯದಲ್ಲಿ ಸೇರಿಸಿಕೋ ಎನ್ನುತ್ತಾರೆ. ಶರಣಲ್ಲಿ ತೆಗೆದಿಕೋ ಎನುತ್ತಾರೆ. ಭಕ್ತರು ಹಾಡುತ್ತಾರೆ. ಏಕೆಂದರೆ ರಾವಣ ರಾಜ್ಯವಿದೆ. ರಾವಣನನ್ನು ಸುಡುತ್ತಾರೆ. ಇದರಿಂದಲೂ ರಾವಣ ರಾಜ್ಯವಿದೆ ಎನ್ನುವುದು ಸಿದ್ಧವಾಗುತ್ತದೆ. ಇದರ ಅರ್ಥವನ್ನೂ ಯಾರೂ ತಿಳಿದುಕೊಂಡಿಲ್ಲ. ರಾವಣನ ವಿನಾಶ ಮಾಡಲು ದಸರಾ ಆಚರಿಸುತ್ತಾರೆ. ಇದೂ ಸಹ ರಾವಣ ರಾಜ್ಯದ ಚಿನ್ಹೆಯಾಗಿದೆ. ಈಗ ಸಂಗಮಯುಗವು ನಡೆಯುತ್ತಿದೆ. ಈ ಸಮಯದಲ್ಲಿಯೇ ರಾಮನ ಶರಣು ಪಡೆದಿದ್ದರು ಮತ್ತು ರಾವಣನನ್ನು ವಿನಾಶ ಮಾಡಿರಬೇಕು. ಹಿಂದೆ ಯಾರೆಲ್ಲಾ ಇದ್ದು ಹೋಗಿದ್ದರು ಅವರದ್ದೇ ನಾಟಕವನ್ನು ಮಾಡುತ್ತಾರೆ. ಈಗ ನಾವೆಲ್ಲರೂ ರಾವಣನ ಜೊತೆಯಿಂದ ಬಿಡುಗಡೆಯಾಗಿ ರಾಮನ ಆಶ್ರಯ ಪಡೆದಿದ್ದೇವೆ ಎನ್ನುವುದು ನೀವು ತಿಳಿದಿದ್ದೀರಿ. ರಾಮ ರಾಜ್ಯದಲ್ಲಿ ರಾವಣ ರಾಜ್ಯವಿರಲು ಸಾಧ್ಯವಿಲ್ಲ. ಮತ್ತು ರಾವಣ ರಾಜ್ಯದಲ್ಲಿ ರಾಮ ರಾಜ್ಯ ವಿರಲು ಸಾಧ್ಯವಿಲ್ಲ. ಅರ್ಧ ಕಲ್ಪ ರಾಮ ರಾಜ್ಯ. ಅರ್ಧಕಲ್ಪ ರಾವಣ ರಾಜ್ಯ ಎಂದು ಗಾಯನವೂ ಇದೆ. ರಾಮ ರಾಜ್ಯವೆಂದು ಸತ್ಯಯುಗ ಮತ್ತು ತ್ರೇತಾಯುಗಕ್ಕೆ ಹೇಳಲಾಗುತ್ತದೆ. ಸಂಗಮ ಯುಗದಲ್ಲಿ ರಾಮನ ಶರಣು ಪಡೆದವರೇ ರಾಮ ರಾಜ್ಯಕ್ಕೆ ಹೋಗಿರಬೇಕು ನಾವೀಗ ರಾಮನ ಶರಣು ಪಡೆದಿದ್ದೇವೆ ಎನ್ನುವುದು ನಿಮಗೆ ತಿಳಿದಿದೆ. ಈ ಇಡೀ ಜಗತ್ತೇ ಒಂದು ದ್ವೀಪವಾಗಿದೆ. ನಾಲ್ಕೂ ಕಡೆ ನೀರಿದೆ. ಮಧ್ಯದಲ್ಲಿ ಭೂ ಖಂಡವಿದೆ. ದೊಡ್ಡ ದೊಡ್ಡ ದ್ವೀಪದಲ್ಲಿ ಚಿಕ್ಕ-ಚಿಕ್ಕ ದ್ವೀಪಗಳೂ ಇವೆ. ರಾವಣ ರಾಜ್ಯವು ಇಡೀ ಜಗತ್ತಿನಲ್ಲಿದೆ ಎಂಬುದು ನೀವು ಮಕ್ಕಳ ಬುದ್ಧಿಯಲ್ಲಿದೆ. ಯಾವ ಸಮಯದಿಂದ ಪ್ರಾರಂಭವಾಗುತ್ತದೆ? ಅರ್ಧ-ಅರ್ಧ ಎಂದು ತಿಳಿಸಲಾಗುತ್ತದೆ. ರಾಮ ರಾಜ್ಯದಲ್ಲಿ ಸುಖ, ಬ್ರಹ್ಮನ ಹಗಲು, ರಾವಣ ರಾಜ್ಯದಲ್ಲಿ ದುಃಖ ಅರ್ಥಾತ್ ಬ್ರಹ್ಮನ ರಾತ್ರಿಯು ಇರುತ್ತದೆ. ಅರ್ಧಕಲ್ಪ ಸಂಪೂರ್ಣ ಬೆಳಕು, ಅರ್ಧ ಕಲ್ಪ ಅಂಧಕಾರವಿರುತ್ತದೆ. ಸತ್ಯಯುಗ ತ್ರೇತಾದಲ್ಲಿ ಭಕ್ತಿಯ ಹೆಸರು ಚಿನ್ಹೆಯೂ ಇರುವುದಿಲ್ಲ. ಅರ್ಧಕಲ್ಪ ದ್ವಾಪರ, ಕಲಿಯುಗದಲ್ಲಿ ಭಕ್ತಿಮಾರ್ಗ ನಡೆಯುತ್ತದೆ. ಭಕ್ತಿಯೂ ಎರಡು ಪ್ರಕಾರದ್ದಿದೆ. ದ್ವಾಪರದಲ್ಲಿ ಎಲ್ಲಕ್ಕಿಂತ ಮೊದಲು ಅವ್ಯಭಿಚಾರಿ ಭಕ್ತಿಯಿರುತ್ತದೆ. ಕಲಿಯುಗದಲ್ಲಿ ವ್ಯಭಿಚಾರಿ ಭಕ್ತಿಯಾಗುತ್ತದೆ. ಈಗ ನೋಡಿ ಮೀನು ಮೊಸಳೆ ಎಲ್ಲದರ ಭಕ್ತಿ ಮಾಡುತ್ತಾರೆ. ಮನುಷ್ಯರ ಬುದ್ಧಿ ಸತೋಪ್ರಧಾನ, ಸತೋ, ರಜೋ, ತಮೋ ಆಗಲೇಬೇಕು. ಪ್ರತಿಯೊಬ್ಬರು ಈ ಸ್ಥಿತಿಗಳನ್ನು ದಾಟಿ ಬರಬೇಕಾಗುತ್ತದೆ.

ನೀವೀಗ ರಾಮ ಅಥವಾ ಶಿವಬಾಬಾ (ತಂದೆ)ರವರ ಮಡಿಲನ್ನು ಪಡೆದಿದ್ದೀರಿ. ಈಶ್ವರಿನಿಗೆ ತಂದೆಯನ್ನುತ್ತಾರೆ. ತಂದೆ ಆದ ಮೇಲೆ ತಂದೆಯನ್ನು ಸರ್ವವ್ಯಾಪಿ ಎನ್ನುವುದನ್ನು ಎಲ್ಲಿ ಕೇಳಿದ್ದೀರಿ? ಇಂತಹ ಶಾಸ್ತ್ರದಲ್ಲಿ ವ್ಯಾಸ ಭಗವಂತ ಬರೆದಿದ್ದಾರೆಂದು ಹೇಳುತ್ತಾರೆ. ಸರ್ವವ್ಯಾಪಿಯ ಜ್ಞಾನದಿಂದ ನಿಮಗೆ ಸ್ವಲ್ಪವೂ ಲಾಭವಿಲ್ಲವೆಂದು ತಂದೆ ತಿಳಿಸುತ್ತಾರೆ. ಸದ್ಗತಿ ಕೊಡುವವರು ಯಾರಾದರೂ ಇರಲೇಬೇಕಾಗುತ್ತದೆ. ಅವರು ಬೇರೆಯವರಾಗಿದ್ದಾರೆ. ಸದ್ಗತಿ ಕೊಡುವವರು ಗಾಡ್ ಫಾದರ್ ಆಗಿದ್ದಾರೆ. ಇದು ನಿಮ್ಮ ಈಶ್ವರೀಯ ಜನ್ಮ ಆಗಿದೆ. ನೀವೀಗ ಸಂಗಮದಲ್ಲಿದ್ದೀರಿ. ಈ ಸಂಗಮದ ಸಮಯವನ್ನು ಹಗಲು ಅಥವಾ ರಾತ್ರಿಯೆಂದು ಎಣಿಸಲಾಗುವುದಿಲ್ಲ. ಇದು ಸಣ್ಣದಾದಂತಹ ಸಂಗಮ. ಈ ಸಮಯದಲ್ಲಿಯೇ ಜಗತ್ತು ಬದಲಾಗುತ್ತದೆ. ಕಬ್ಬಿಣದ ಯುಗವು ಬದಲಾಗಿ ಚಿನ್ನದ ಯುಗವಾಗುತ್ತದೆ. ರಾವಣ ರಾಜ್ಯವು ಪರಿವರ್ತನೆಯಾಗಿ ರಾಮ ರಾಜ್ಯವಾಗುತ್ತದೆ ಆ ರಾಮ ರಾಜ್ಯಕ್ಕಾಗಿಯೇ ನೀವು ಪುರುಷಾರ್ಥ ಮಾಡುತ್ತಿದ್ದೀರಿ. ಇಂತಹ ಗೀತೆಗಳೂ ಸಹ ಉಪಯೋಗಕ್ಕೆ ಬರುತ್ತವೆ, ಇದು ಶ್ಲೋಕವಿದ್ದಂತಿದೆ. ಇದರ ಅರ್ಥವನ್ನು ತಿಳಿಸಲಾಗುತ್ತದೆ. ರಾಮನಿಗೆ ಶರಣಾಗುವುದರಿಂದ ನೀವು ಸುಖವನ್ನು ಪಡೆಯುವಿರಿ. ಅರ್ಥಾತ್ ರಾಮ ರಾಜ್ಯಕ್ಕೆ ಹೋಗುವಿರಿ. ನೀನು ಮೊದಲು ಸುಖ ಇಷ್ಟ ಪಡುವೆಯೊ ಅಥವಾ ದುಃಖವೋ? ಎಂಬ ಒಂದು ಕಥೆಯಿದೆ. ಅದಕ್ಕೆ ಸುಖವೇ ಬೇಕೆಂದು ಹೇಳಿದ, ಏಕೆಂದರೆ ಸುಖದಲ್ಲಿ ಯಮದೂತರು ಕರೆದುಕೊಂಡು ಹೋಗಲು ಬರುವುದಿಲ್ಲ. ಅದರೆ ಅವರು ಅರ್ಥ ತಿಳಿದಿಲ್ಲ. ತಂದೆ ಕುಳಿತುಕೊಂಡು ಬಹಳ ಚೆನಾಗಿ ತಿಳಿಸುತ್ತಾರೆ. ನಮ್ಮ ದೇವೀ-ದೇವತಾ ಕುಲ ಬಹಳ ಶ್ರೇಷ್ಠವಾಗಿತ್ತೆಂಬುದು ನಿಮ್ಮ ಬುದ್ಧಿಯಲ್ಲಿದೆ.

ಮೊದಲು ಬ್ರಾಹ್ಮಣ ಕುಲ ಇರುತ್ತದೆ. ನಂತರ ದೇವತೆಗಳಾಗುತ್ತಾರೆ. ನಂತರ ಕ್ಷತ್ರಿಯರು ವೈಶ್ಯರು, ಶೂದ್ರರಾಗುತ್ತಾರೆ. ನಾವೇ ವರ್ಣಗಳನ್ನು ಪಾಸ್ ಮಡಿಕೊಂಡು ಬಂದಿದ್ದೇವೆಂದು ನಿಮಗೆ ಗೊತ್ತಿದೆ. ಈಗ ಬಂದು ಬ್ರಾಹ್ಮಣರಾಗಿದ್ದೇವೆ. ಈ ವಿರಾಟ ರೂಪವು ಸಂಪೂರ್ಣವಾಗಿ ಸರಿಯಾಗಿಯೇ ಇದೆ. ಇದರಿಂದ ವರ್ಣಗಳು ಸಿದ್ಧವಾಗುತ್ತವೆ. 84 ಜನ್ಮಗಳನ್ನು ಒಂದೇ ಸತ್ಯಯುಗದಲ್ಲಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ವರ್ಣಗಳೂ ತಿರುಗುತ್ತಿರುತ್ತವೆ. ಡ್ರಾಮಾದ ಚಕ್ರ ಪೂರ್ತಿಯಾಗುವುದರಿಂದಲೆ 84 ಜನ್ಮಗಳೂ ಪೂರ್ತಿಯಾಯಿತೆಂದೇ ಅರ್ಥ. ಚಕ್ರ ತಿರಗಲೇಬೇಕು. ಆದ್ದರಿಂದ ದೈವೀ ವರ್ಣದಲ್ಲಿ ಇಷ್ಟು ಸಮಯ, ಕ್ಷತ್ರಿಯ ವರ್ಣದಲ್ಲಿ ಇಷ್ಟು ಸಮಯ ಎಂದು ತೋರಿಸಲಾಗುತ್ತದೆ. ಮೊದಲು ಇದರ ಬಗ್ಗೆ ತಿಳಿದಿರಲಿಲ್ಲ ಅಲ್ಲವೇ? ಇಂತಹ ವರ್ಣಗಳಲ್ಲಿ ಬರಬೇಕೆಂದು ಯಾವುದಾದರೂ ಶಾಸ್ತ್ರಗಳಲ್ಲಿ ಕೇಳಿದ್ದೀರೇನು? 84 ಜನ್ಮಗಳನ್ನು ಯಾರು ತೆಗೆದುಕೊಳ್ಳುತ್ತಾರೆಂದು ನಿಮಗೆ ಗೊತ್ತಿದೆ. ಆತ್ಮ ಮತ್ತು ಪರಮಾತ್ಮ ಬಹಳ ಕಾಲ ಅಗಲಿ ಹೋಗಿದ್ದರು. ಈ ಮಾತನ್ನು ಸಿದ್ಧ ಮಾಡಿ ತಿಳಿಸಬೇಕು. ಎಲ್ಲಕ್ಕಿಂತ ಮೊದಲು ದೇವೀ ದೇವತೆಗಳೇ ಭಾರತದಲ್ಲಿದ್ದರು. ಭಾರತ ಚಿನ್ನದ ಯುಗವಾಗಿತ್ತು. ಆ ಸಮಯದಲ್ಲಿ ಬೇರೆ ಯಾವುದೇ ಧರ್ಮಗಳೂ ಇರಲಿಲ್ಲ. ಮತ್ತೆ ಪುನಃ ಚಕ್ರ ತಿರುಗಲೇಬೇಕು. ಮನುಷ್ಯರು ಪುನಃ ಪುನರ್ಜನ್ಮ ತೆಗೆದುಕೊಳ್ಳಲೇಬೇಕು. ಚಕ್ರದ ಬಗ್ಗೆ ತಿಳಿಸುವುದು ಬಹಳ ಸುಲಭವಾಗಿದೆ. ಪ್ರದರ್ಶನಿಯಲ್ಲಿ ಈ ರೀತಿ, ಈ ರೀತಿ ತಿಳಿಸಿ ಎಂದು ಬಾಬಾ ನಿರ್ದೇಶನ ಕೊಡುತ್ತಾರೆ. ನಾವೀಗ ಹೊಸ ಜಗತ್ತಿಗೆ ಹೋಗಬೇಕು. ಅದಕ್ಕಾಗಿ ತಂದೆಯು ಹೇಳುತ್ತಾರೆ. ಇದು ಹಳೆಯ ಜಗತ್ತು. ಹಳೆಯ ಶರೀರ ಸಂಬಂಧಿಕರು ಯಾರೆಲ್ಲಾ ಇರುವರೋ ಬುದ್ಧಿಯಿಂದ ಎಲ್ಲವನ್ನು ತ್ಯಾಗ ಮಾಡಿ. ಬುದ್ಧಿಯಿಂದ ಹೊಸ ಮನೆಯನ್ನು ಆಹ್ವಾನಿಸಲಾಗುತ್ತದೆ. ಇದು ಬೇಹದ್ದಿನ ಸನ್ಯಾಸವಾಗಿದೆ. ದೇಹ ಸಹಿತ ಹಳೆಯ ಜಗತ್ತಿನ ಸಂಬಂಧಿಗಳು ಯಾವುದೆಲ್ಲಾ ಇದೆ. ಅದೆಲ್ಲವನ್ನೂ ಮರೆಯಬೇಕು. ತಮ್ಮನ್ನು ದೇಹೀ ಎಂದು ತಿಳಿಯಿರೆಂದು ತಂದೆ ಹೇಳುತ್ತಾರೆ. ನೀವು ನಿಮ್ಮ ಮೂಲ ಮನೆ ಮುಕ್ತಿಧಾಮದಲ್ಲಿದ್ದವರು. ಈಗ ತಿರುಗಿ ಹೋಗಬೇಕೆಂದು ತಂದೆಯು ಎಲ್ಲಾ ಧರ್ಮದವರಿಗೂ ಹೇಳುತ್ತಾರೆ. ಮುಕ್ತಿಯನ್ನು ಎಲ್ಲರೂ ನೆನಪು ಮಾಡಿಕೊಳ್ಳುತ್ತಾರಲ್ಲವೇ? ಈಗ ನಿಮ್ಮ ಮನೆಗೆ ನಡೆಯಿರಿ. ಅಲ್ಲಿಂದಲೇ ಅಶರೀರಿಯಾಗಿ ಬಂದಿದ್ದೀರಿ. ಮತ್ತೆ ಪುನಃ ಅಶರೀರಿಯಾಗಿಯೇ ಹೋಗಬೇಕು. ಶರೀರವನ್ನಂತೂ ತೆಗೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಯಾವಾಗ ಬರಬೇಕು. ಯಾವಾಗ ಹೋಗಬೇಕು ಈ ಚಕ್ರವನ್ನು ತಿಳಿಯಬೇಕು. ಸತ್ಯಯುಗದಲ್ಲಿ ಎಲ್ಲದಕ್ಕಿಂತ ಮೊದಲು ದೇವೀ ದೇವತಾ ಧರ್ಮದವರೇ ಬರುತ್ತಾರೆ ನಂತರ ಉಳಿದವರು ನಂಬರ್ವಾರ್ ಆಗಿ ಬರುತ್ತಾ ಹೋಗುತ್ತಾರೆ. ಮೂಲವತನದಿಂದ ಎಲ್ಲರೂ ಈ ಸ್ಥೂಲವತನಕ್ಕೆ ಬಂದಾಗ ವಾಪಸ್ ಹೋಗುವುದು ಪ್ರಾರಂಭವಾಗುತ್ತದೆ. ಅಲ್ಲಿಗೆ ಆತ್ಮವೇ ಹೋಗುತ್ತದೆ. ಈ ಶರೀರವು ರಾವಣನ ಆಸ್ತಿಯಾಗಿದೆ. ಅದನ್ನು ರಾವಣನಿಗೇ ಕೊಟ್ಟು ಹೋಗಬೇಕು. ಇದೆಲ್ಲವೂ ಇಲ್ಲಿಯೇ ವಿನಾಶವಾಗುತ್ತದೆ. ನೀವು ಅಶರೀರಿಯಾಗಿ ಹೋಗಿ. ನಾನು ಕರೆದುಕೊಂಡು ಹೋಗಲು ಬಂದಿದ್ದೇನೆಂದು ತಂದೆಯು ಹೇಳುತ್ತಾರೆ. ತಂದೆಯು ಎಷ್ಟೊಂದು ಸರಳವಾಗಿ ತಿಳಿಸುತ್ತಾರೆ. ಆದರೆ ಧಾರಣೆಯೂ ಇರಬೇಕು. ಜೊತೆಗೆ ಅನೇಕರಿಗೆ ತಿಳಿಸಲು ಬೇಕು. ಬಾಬಾ ನಾನು ಕೇಳಿ ಅನೇಕರಿಗೆ ತಿಳಿಸುತ್ತೇವೆಂದು ನೀವು ಭರವಸೆಯನ್ನೂ ಕೊಡುತ್ತೀರಿ. ಈ ಅಭ್ಯಾಸ ಯಾರಿಗಿರುತ್ತದೆಯೋ ಅವರೇ ತಿಳಿಸಲು ಸಾಧ್ಯವಾಗುವುದು. ನಾವು ಈ ಜಗತ್ತನ್ನು ಪವಿತ್ರ ಮಾಡಬೇಕೆಂಬುದು ನಿಮಗೆ ತಿಳಿದಿದೆ. ಯೋಗದಲ್ಲಿದ್ದು ಶಾಂತಿ ಮತ್ತು ಸುಖದ ದಾನವನ್ನು ಕೊಡಬೇಕು. ಅದಕ್ಕಾಗಿ ರಾತ್ರಿಯಲ್ಲಿ ಎದ್ದು ಯೋಗದಲ್ಲಿ ಕುಳಿತುಕೊಳ್ಳಿರೆಂದು ತಂದೆಯು ಹೇಳುತ್ತಾರೆ. ವಿಶ್ವಕ್ಕೆ ಯೋಗ ದಾನ ಕೊಡಿ. ಬೆಳಗ್ಗೆ ಎದ್ದು ಅಶರೀರಿಯಾಗಿ ಕುಳಿತುಕೊಳ್ಳಿ. ನೀವು ಭಾರತಕ್ಕೆ ಮಾತ್ರವಲ್ಲದೆ ಪೂರ್ಣ ವಿಶ್ವಕ್ಕೆಲ್ಲಾ ಯೋಗದಿಂದ ಶಾಂತಿಯ ದಾನವನ್ನು ಕೊಡುತ್ತೀರಿ. ಚಕ್ರದ ಜ್ಞಾನ ಸ್ಮರಿಸುವುದರಿಂದ ನೀವು ಸುಖದ ದಾನ ಕೊಡುತ್ತೀರಿ. ಸುಖವು ಧನದಿಂದ ಸಿಗುತ್ತದೆ. ಬೆಳಗ್ಗೆಯೇ ಎದ್ದು ನೆನಪಿನಲ್ಲಿ ಕುಳಿತುಕೊಳ್ಳಿರಿ. ಬಾಬಾ ನಿಮ್ಮ ಬಳಿಗೆ ಬಂದೇ ಬಿಡುವೆ, ಈಗ ನಮ್ಮ 84 ಜನ್ಮ ಪೂರ್ತಿಯಾಯಿತು ಎಂದು ಬೆಳಗ್ಗೆ ಎದ್ದು ತಂದೆಯನ್ನು ನೆನಪಿನಲ್ಲಿ ಕುಳಿತುಕೊಳ್ಳಿರಿ. ಬಾಬಾ ನಿಮ್ಮ ಬಳಿಗೆ ಬಂದೇ ಬಿಡುವೆ. ಈಗ ನಮ್ಮ 84 ಜನ್ಮ ಪೂರ್ತಿಯಾಯಿತು ಎಂದು. ಬೆಳಗ್ಗೆ ಎದ್ದು ತಂದೆಯನ್ನು ನೆನಪು ಮಾಡಿ ಶಾಂತಿ ಮತ್ತು ಸುಖದ ದಾನವನ್ನು ಕೊಡಿ. ಯೋಗ ಮತ್ತು ಜ್ಞಾನದಿಂದ ಆರೋಗ್ಯ ಹಾಗೂ ಐಶ್ವರ್ಯವು ಸಿಗುತ್ತದೆ. ನಾವು ಸದಾಕಾಲದ ಆರೋಗ್ಯವಂತರಾದಾಗ ಸೃಷ್ಟಿಯೇ ಹೊಸದಾಗುತ್ತದೆ. ಸತ್ಯಯುಗ ತ್ರೇತಾದಲ್ಲಿ ಆರೋಗ್ಯ ವಂತರು, ಐಶ್ವರ್ಯವಂತರು ಇರುತ್ತಾರೆ. ಕಲಿಯುಗದಲ್ಲಿ ರೋಗಿಗಳು ಬಡವರೂ ಇದ್ದಾರೆ. ಈಗ ನಾವು ಆರೋಗ್ಯವಂತರು ಐಶ್ವರ್ಯವಂತರು ಆಗುತ್ತೇವೆ. ನಂತರ ಅರ್ಧಕಲ್ಪ ನಮ್ಮದೇ ರಾಜ್ಯ ನಡೆಯುತ್ತದೆ. ಬುದ್ಧಿಯಲ್ಲಿ ಈ ಜ್ಞಾನವಿದ್ದಾಗ ಐಶ್ವರ್ಯವಂತರಾಗಬೇಕೆಂದರೆ, ಈ ಈಶ್ವರೀಯ ನೇಚರ್ ಕ್ಯೂರ್ ಸೆಂಟರ್ ಗೆ ಬನ್ನಿರಿ ಎಂದು ನೀವು ಬರೆಯಲೂಬಹುದು. ಆದರೆ ಯಾರಲ್ಲಿ ಜ್ಞಾನವಿರುತ್ತದೆಯೋ ಅವರು ಮಾತ್ರ ಈ ರೀತಿ ಬರೆಯುತ್ತಾರೆ. ನಾವು ಸೆಂಟರನ್ನು ತೆರೆದು ಕೊಡುತ್ತೇವೆ. ತಾವು ಬಂದು ಸರ್ವೀಸ್ ಮಾಡಿ ಎಂದು ಹೇಳುವುದಕ್ಕೆ ಆಗುತ್ತದೆಯೇ? ಸೇವಾಕೇಂದ್ರವನ್ನು ತೆರೆಯುವಂತಹವರೇ ಸ್ವಯಂ ಸರ್ವೀಸ್ ಮಾಡಬೇಕಾಗುತ್ತದೆ. ಪವಿತ್ರತೆಗಾಗಿಯೇ ಬಹಳ ಜಗಳವು ನಡೆಯುತ್ತದೆ. ವಿಷ ಸಿಗದಿರುವ ಕಾರಣ ಅತ್ಯಾಚಾರಗಳೂ ಆಗುತ್ತೇವೆ. ಈಗ ಸಂಗಮಯುಗವು ನಡೆಯುತ್ತದೆ. ನೀವು ಸುಖಧಾಮ ಮತ್ತು ಶಾಂತಿಧಾಮವನ್ನೇ ಬುದ್ಧಿಯಿಂದ ನೆನಪು ಮಾಡಬೇಕು. ದುಃಖಧಾಮವಿರುವ ಕಾರಣ ದಿಂದಲೇ ಸುಖಧಾಮವನ್ನು ನೆನಪು ಮಾಡುತ್ತಾರೆ. ದುಃಖದಲ್ಲಿಯೇ ಎಲ್ಲರೂ ಸ್ಮರಣೆ ಮಾಡುತ್ತಾರೆ ಎಂದೂ ಗಾಯನವಿದೆ. ಇದು ಪತಿತ ಜಗತ್ತು. ಕಲಿಯುಗದ ಅಂತ್ಯದಲ್ಲಿ ಎಲ್ಲರೂ ಪತಿತರಾಗಲೇಬೇಕೆಂದು "ಲಾ" (ಕಾನೂನು) ಹೇಳುತ್ತದೆ. ಸಂಗಮ ಬಂದಾಗಲೇ ರಾಮ ರಾಜ್ಯದ ಸ್ಥಾಪನೆಯಾಗುತ್ತದೆ ಮತ್ತು ರಾವಣ ರಾಜ್ಯದ ವಿನಾಶವೂ ಆಗುತ್ತದೆ. ಈಗ ವಿನಾಶದ ತಯಾರಿ ನಡೆಯುತ್ತದೆ. ರಾವಣ ರಾಜ್ಯವು ಸಮಾಪ್ತಿ ಆಗಲೇಬೇಕು. ಬಾಕಿ ಈ ಗೊಂಬೆಗಳ ಆಟವನ್ನೇನು ಆಡುತ್ತಾರೆ. ಇದರಲ್ಲಿ ಎಷ್ಟೊಂದು ಗೊಂಬೆಗಳನ್ನು ಮಾಡುತ್ತಾರೆ.

ಆದ್ದರಿಂದ ಇದಕ್ಕೆ ಅಂಧಶ್ರದ್ಧೆಯೆಂದು ಹೇಳಲಾಗುತ್ತದೆ. ಭಾರತದಲ್ಲಿ ಎಷ್ಟೊಂದು ಚಿತ್ರಗಳು ರಚನೆಯಾಗುತ್ತವೆ. ಅಷ್ಟು ಇನ್ನೆಲ್ಲೂ ಆಗುವುದಿಲ್ಲ. ಭಾರತದಲ್ಲಿ ಬೇಕಾದಷ್ಟು ಚಿತ್ರಗಳಿವೆ. ಬ್ರಹ್ಮನ ಹಗಲು, ಬ್ರಹ್ಮನ ರಾತ್ರಿ ಎಂದು ಗಾಯನವೂ ಇದೆ. ಹಗಲಿಗೆ ಬಹಳ ಸಮಯವನ್ನು ಏಕೆ ಕೊಟ್ಟಿದ್ದಾರೆ? ಇದನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಮೊದಲು ಅವ್ಯಭಿಚಾರಿ ಭಕ್ತಿಯಿರುತ್ತದೆ. ನಂತರ ವ್ಯಭಿಚಾರಿ. ಮೊದಲು 16 ಕಲೆ. ನಂತರ 14 ಕಲೆ. ಅಂತ್ಯದಲ್ಲಂತೂ ಯಾವುದಾದರೂ ಕಲೆ ಸ್ವಲ್ಪ ಮಾತ್ರ ಉಳಿದಿರುತ್ತದೆ. ಈಗಿನ ಸಮಯದಲ್ಲಂತೂ ಯಾವುದೇ ಕಲೆಯಿಲ್ಲ. ಇದು ತಮೋಪ್ರಧಾನ ಜಗತ್ತಿನ ಸಮಯವಾಗಿದೆ. ತಮೋ ಕಲಿಯುಗದಿಂದ ಪ್ರಾರಂಭವಾಗುತ್ತದೆ. ಮತ್ತು ಅಂತ್ಯದಲ್ಲಿ ತಮೋಪ್ರಧಾನ ಎಂದು ಹೇಳಲಾಗುತ್ತದೆ. ಈಗ ಜಗತ್ತು ವಿಸ್ತಾರವಾಗಿ ಬಿಟ್ಟಿದೆ. ಹಳೆಯ ವಸ್ತುವಿಗೆ ತಾನೇ ತಾನಾಗಿ ಬೆಂಕಿ ಬೀಳುತ್ತದೆ-ಬಿದರಿನ ಕಾಡಿಗೆ ಸ್ವತಃವಾಗಿಯೇ ಬೆಂಕಿ ಬೀಳುವಂತೆ, ಈ ಹಳೆಯ ಜಗತ್ತಿಗೂ ಬೆಂಕಿ ಬೀಳುತ್ತದೆ. ಪರಸ್ಪರ ಸ್ವಲ್ಪವೇ ಏನಾದರೂ ಆದರೂ ಸಹ ಬೆಂಕಿ ಪ್ರಜ್ವಲಿತವಾಗುತ್ತದೆ. ಮನೆಗಳಲ್ಲಿಯೂ ಸಣ್ಣ ಮಾತಿನಿಂದಲೇ ಜಗಳವಾಗುತ್ತದೆ. ಪರಸ್ಪರ ಸ್ನೇಹತರಲ್ಲಿಯೂ ಸಣ್ಣ ಮಾತಿನ ಕಾರಣದಿಂದ ಎಷ್ಟು ಶತ್ರುಗಳಾಗುತ್ತಾರೆಂದರೆ ಒಬ್ಬರನ್ನೊಬ್ಬರು ಕೂರಳನ್ನು ಕತ್ತಿರಿಸಲು ತೊಡಗುತ್ತಾರೆ. ಕ್ರೋಧವು ಕಡಿಮೆಯೇನಲ್ಲ. ಒಬ್ಬರನ್ನೊಬ್ಬರು ಕೊಲ್ಲಲು ಎಷ್ಟೊಂದು ತಯಾರು ಮಾಡುತ್ತಿದ್ದಾರೆ ನೋಡಿ. ಇದೂ ಸಹ ಡ್ರಾಮಾ ಆಗಿದೆ. ಕ್ರಿಶ್ಚಿಯನ್ನರು ಇಬ್ಬರೂ ದೊಡ್ಡವರೇ ಆಗಿದ್ದಾರೆ. ಪರಸ್ಪರ ಸೇರಿದರೆ ಏನು ಬೇಕಾದರು ಮಾಡಬಹುದು. ಪೋಪ್ ಕ್ರಿಶ್ಚಿಯನ್ನರ ಮುಖ್ಯಸ್ಥ ಆಗಿದ್ದಾರೆ. ಅವರಿಗೆ ಬಹಳಷ್ಟು ಗೌರವವನ್ನೂ ಕೊಡುತ್ತಾರೆ. ಆದರೆ ಅವರು ಹೇಳುವುದನ್ನೂ ಕೇಳುವುದಿಲ. ಇಲ್ಲೂ ಸಹ ತಂದೆಯನ್ನು ಒಪ್ಪದೇ ಇರುವವರು ವಿನಾಶೀ ಪದವಿಯನ್ನು ಪಡೆಯುತ್ತಾರೆ. ಶ್ರೀಮತದಂತೆ ನಡೆಯಬೇಕು. ಶ್ರೀಮತ್ ಭಗವದ್ಗೀತೆಯಾಗಿದೆ. ಇನ್ನಾವುದೇ ಶಾಸ್ತ್ರಗಳಲ್ಲಿ ಶ್ರೀಮತ ಇಲ್ಲ. ಶ್ರೀ ಎಂದರೇ ಶ್ರೇಷ್ಠಾತಿ ಶ್ರೇಷ್ಠ, ಯಾರು ಎಂದೂ ಪುನರ್ಜನ್ಮದಲ್ಲಿ ಬರುವುದಿಲ್ಲ. ಮನುಷ್ಯರಂತೂ ಪುನರ್ಜನ್ಮದಲ್ಲಿ ಬರುತ್ತಾರೆ. ವಿದ್ವಾಂಸರಂತೂ ಜನನ ಮರಣ ರಹಿತನಿಂದ ಆಗಿರುವಂತಹ ಗೀತೆಯಲ್ಲಿ ಪೂರ್ಣ 84 ಜನ್ಮಗಳನ್ನು ಪಡೆದಿರುವವರ ಹೆಸರನ್ನು ಸೇರಿಸಿ ಬಿಟ್ಟಿದ್ದಾರೆ. ವಾಸ್ತವದಲ್ಲಿ ಪರಮಪಿತ ಪರಮಾತ್ಮನೇ ಜ್ಞಾನದ ಸಾಗರ, ಪವಿತ್ರತೆಯ ಸಾಗರ, ಪತಿತ-ಪಾವನ ಎಂದು ಗಾಯನ ಮಾಡಲ್ಪಟಿದ್ದಾರೆ. ಅವರೇ ಮಕ್ಕಳಿಗೆ ವರದಾನ ಕೊಡುತ್ತಾರೆ. ಅವರ ಬದಲು ಕೃಷ್ಣನ ಹೆಸರನ್ನು ಹಾಕಿ ಬಿಟ್ಟಿದ್ದಾರೆ. ಮೊದಲು ಶಿವ ಜಯಂತಿ ನಡೆಯುತ್ತದೆ. ನಂತರ ಕೃಷ್ಣ ಜಯಂತಿ. ಶಿವ ತಂದೆಯು ಬರುವುದೇ ಹೊಸ ಜಗತ್ತಿನ ಸ್ಥಾಪನೆ ಮಾಡಲು ಅಂದಮೇಲೆ ಮೊದಲು ತಂದೆಯ ಜನ್ಮ ನಂತರ ಮಗು ಕೃಷ್ಣನ ಜನ್ಮವಾಗುತ್ತದೆ. ಕೃಷ್ಣನೂ ಒಬ್ಬನೇ ಇರುವುದಿಲ್ಲ. ದೈವೀ ಸಂಪ್ರದಾಯ ವೆಂದು ಹೇಳಲಾಗುತ್ತದೆಯಲ್ಲವೇ? ಅಂದಾಗ ಎಷ್ಟು ದೊಡ್ಡ ತಪ್ಪು ಮಾಡಿ ಬಿಟ್ಟಿದ್ದಾರೆ. ಯಾರಾದರೂ ಒಬ್ಬರೂ ಈ ಮಾತನ್ನು ತಿಳಿದರೆ ಅವರ ಎಲ್ಲಾ ಜಿಜ್ಞಾಸುಗಳು ಇಲ್ಲದಂತಾಗುತ್ತಾರೆ. ಎಲ್ಲರ ಮುಖ ಕಪ್ಪಾಗುತ್ತದೆ. ಎಷ್ಟು ದೊಡ್ಡ ತಪ್ಪಾಗಿ ಬಿಟ್ಟದೆ. ಆಗಲೇ ತಂದೆಯು ಬರಬೇಕಾಗುತ್ತದೆ. ಯಾರಿಗಾದರೂ ತಿಳಿಸುವುದರಲ್ಲಿಯೂ ಸಮಯವು ಹಿಡಿಸುತ್ತದೆ. ಪರಮಪಿತ ಪರಮಾತ್ಮನ ಜೊತೆಗೆ ತಮಗೆ ಎಂತಹ ಸಂಬಂಧವಿದೆ? ಈ ಮಾತಿನ ಬಗ್ಗೆ ಮೊದಲು ನಿಶ್ಚಯ ಮಾಡಿಸಿ. ಆಗ ಭಗವಂತನನ್ನು ತಂದೆ ಎಂದು ತಿಳಿಯುತ್ತಾರೆ. ಭಗವಂತ ನನ್ನ ಭಗವಂತನ ಸ್ಥಾನದಲ್ಲಾದರೂ ಇಡಿ. ಎಲ್ಲರೂ ಒಂದೇ ರೀತಿ ಇರಲು ಹೇಗೆ ಸಾಧ್ಯ? ಎಲ್ಲವೂ ಭಗವಂತನ ಲೀಲೆಯೆಂದೇ ಹೇಳುತ್ತಾರೆ. ಬಿಂದು ರೂಪವನ್ನು ಬಿಟ್ಟು ಇನ್ನೊಂದು ರೂಪ ತೆಗೆದುಕೊಳ್ಳುತ್ತಾರೆ ಎನ್ನುತ್ತಾರೆ. ಆದರೆ ಪರಮಾತ್ಮ ಪುನರ್ಜನ್ಮ ತೆಗೆದುಕೊಳ್ಳುತ್ತಾರೇನು? ಈ ಬಾಪ್ ದಾದಾ ಇಬ್ಬರೂ ಕಂಬೈಂಡ್ ಆಗಿದ್ದಾರೆ. ಮತ್ತು ಮಕ್ಕಳಿಗೆ ತಿಳಿಸುತ್ತಿದ್ದಾರೆ. ಬಾಪ್-ದಾದಾ ಇದರ ಅರ್ಥವೂ ಯಾರ ಬುದ್ಧಿಯಲ್ಲಿಲ್ಲ. ತ್ವಮೇವ ಮಾತಶ್ಚ ಪಿತಾ.... ಎಂದು ಹೇಳುತ್ತಾರೆ. ಓ ಗಾಡ್ ಫಾದರ್ ಎಂದು ಹೇಳಿದ ಮೇಲೆ ಮದರ್ ಇರಲೇಬೇಕಲ್ಲವೇ? ಆದರೆ ಈ ವಿಷಯ ಯಾರ ಬುದ್ಧಿಗೂ ಬರುವುದಿಲ್ಲ.

ಯಾವಾಗ ಶರಣು ಮಾಡಿಕೊಳ್ಳುವುದು? ಇದನ್ನು ಮಕ್ಕಳಿಗೆ ತಿಳಿಸಿ ಕೊಟ್ಟಿದ್ದಾರೆ. ರಾವಣ ರಾಜ್ಯ ಸಮಾಪ್ತಿಯಾದಾಗ ರಾಮ ಬರುತ್ತಾರೆ. ರಾಮನಿಗೆ ಶರಣು ಹೋಗುವುದರಿಂದಲೇ ಸದ್ಗತಿ ಸಿಗುತ್ತದೆ. ರಾಮ ರಾಜ್ಯ ಬೇಕೆಂದು ಹೇಳುತ್ತಾರೆ ಅವರಿಗೆ ಸೂರ್ಯವಂಶಿ ರಾಜ್ಯದ ಬಗ್ಗೆ ಗೊತ್ತೇ ಇಲ್ಲ. ರಾಮ ರಾಜ್ಯ ಹೊಸ ಜಗತ್ತು. ಹೊಸ ಭಾರತ ಬೇಕೆಂದು ಹೇಳುತ್ತಾರೆ. ಅದೀಗ ಸ್ಥಾಪನೆಯಾಗುತ್ತಿದೆ. ಡ್ರಾಮಾ ನಡೆಯಲೇಬೇಕಲ್ಲವೇ? ಇದು ಮನುಷ್ಯರಿಂದ ದೇವತೆ ಯಾಗುವಂತಹ ವಿದ್ಯೆಯಾಗಿದೆ. ಮನುಷ್ಯರು ಯಾರನ್ನೂ ದೇವತೆಯನ್ನಾಗಿ ಮಾಡಲು ಸಾಧ್ಯವಿಲ್ಲ. ತಂದೆಯೇ ಬಂದು ಮನುಷ್ಯರನ್ನು ದೇವತೆಯನ್ನಾಗಿ ಮಾಡುತ್ತಾರೆ. ಏಕೆಂದರೆ ತಂದೆಯೂ ಸ್ವರ್ಗವನ್ನು ಸ್ಥಾಪಿಸುತ್ತಾರೆ. ಬ್ರಾಹ್ಮಣರ ಮಾಲೆಯೆಂದು ಗಾಯನವಿಲ್ಲ. ವೈಜಯಂತಿ ಮಾಲೆ ವಿಷ್ಣುವಿನದಾಗಿದೆ. ಇದು ಈಶ್ವರೀಯ ಪರಿವಾರ. ಈಗ ಹೊಸದಾಗಿ ಪ್ರಾರಂಭವಾಗುತ್ತದೆ. ಮೊದಲು ರಾವಣನ ಅಸುರೀ ಪರಿವಾರವಿತ್ತು. ರಾವಣನನ್ನು ಅಸುರ ಎಂದು ಹೇಳಲಾಗುತ್ತದೆ. ಈ ಕಂಸ ಜರಾಸಂಧ ಎನ್ನುವ ಹೆಸರುಗಳೂ ಈಗ ಸಿದ್ಧವಾಗುತ್ತದೆ. ಜನ್ಮ ಜನ್ಮಾಂತರದಿಂದಲೂ ನಿಮಗೆ ಸಾಕಾರನಿಂದಲೇ ಆಸ್ತಿ ಸಿಗುತ್ತದೆ. ಸತ್ಯಯುಗದಲ್ಲಿಯೂ ನಿಮಗೆ ಸಾಕಾರನಿಂದಲೇ ಆಸ್ತಿ ಸಿಗುತ್ತದೆ. ಕೇವಲ ಈ ಸಮಯದಲ್ಲಿ ಮಾತ್ರ ನಿಮಗೆ ನಿರಾಕಾರ ತಂದೆಯಿಂದ ಆಸ್ತಿ ಸಿಗುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ

ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ದೇಹ ಸಹಿತ ಹಳೆಯ ಜಗತ್ತಿನ ಸಂಬಂಧಿಗಳನ್ನೆಲ್ಲಾ ಮರೆತು ಸ್ವಯಂನ್ನು ದೇಹೀ ಎಂದು ತಿಳಿಯಬೇಕು. ಬುದ್ಧಿಯಿಂದ ಹೊಸ ಮನೆಯ ಆಹ್ವಾನ ಮಾಡಬೇಕು.

2. ಬೆಳಗ್ಗೆ ಬೆಳಗ್ಗೆ ಎದ್ದು ಇಡೀ ಜಗತ್ತಿಗೆ ಶಾಂತಿ ಮತ್ತು ಸುಖದ ದಾನವನ್ನು ಕೊಡಬೇಕು.

ವರದಾನ: ಆಕಾರಿ ಹಾಗೂ ನಿರಾಕಾರಿ ಸ್ಥಿತಿಯ ಅಭ್ಯಾಸದ ಮೂಲಕ ಏರುಪೇರಿನಲ್ಲಿಯೂ ಅಚಲರಾಗಿರುವ ತಂದೆಯ ಸಮಾನ ಭವ.

ಹೇಗೆ ಸಾಕಾರದಲ್ಲಿರುವುದು ಸ್ವಾಭಾವಿಕವಾಗಿದೆಯೋ ಹಾಗೆಯೇ ನಾನು ಆಕಾರಿ ಫರಿಶ್ತೆ ಆಗಿದ್ದೇನೆ ಹಾಗೂ ನಿರಾಕಾರಿ ಶ್ರೇಷ್ಠ ಆತ್ಮನಾಗಿದ್ದೇನೆ - ಇವೆರಡು ಸ್ಮೃತಿಗಳು ಸ್ವಾಭಾವಿಕವಾಗಲಿ. ಏಕೆಂದರೆ ಶಿವ ತಂದೆಯು ನಿರಾಕಾರಿ ಹಾಗೂ ಬ್ರಹ್ಮಾ ತಂದೆಯು ಆಕಾರಿ ಆಗಿದ್ದಾರೆ. ಒಂದುವೇಳೆ ಇಬ್ಬರೊಂದಿಗೂ ಪ್ರೀತಿಯಿದೆಯೆಂದರೆ ಸಮಾನರಾಗಿ. ಸಾಕಾರದಲ್ಲಿರುತ್ತಾ ಅಭ್ಯಾಸ ಮಾಡಿರಿ - ಈಗೀಗ ಆಕಾರಿ ಮತ್ತು ಈಗೀಗ ನಿರಾಕಾರಿ. ಈ ಅಭ್ಯಾಸವೇ ಏರುಪೇರಿನಲ್ಲಿ ಅಚಲರನ್ನಾಗಿ ಮಾಡಿ ಬಿಡುತ್ತದೆ.

ಸ್ಲೋಗನ್: ದಿವ್ಯ ಗುಣಗಳ ಪ್ರಾಪ್ತಿಯಾಗುವುದೇ ಅತಿ ಶ್ರೇಷ್ಠವಾದ ಪ್ರಭು ಪ್ರಸಾದವಾಗಿದೆ.

ಲವಲೀನ ಸ್ಥಿತಿಯ ಅನುಭವ ಮಾಡಿರಿ:

ಯಾರು ಪ್ರಿಯವಾಗಿರುತ್ತಾರೆಯೋ ಅವರನ್ನು ನೆನಪು ಮಾಡುವುದಿಲ್ಲ, ಅವರ ನೆನಪು ಸ್ವತಹವಾಗಿಯೇ ಬರುತ್ತದೆ. ಕೇಲ ಹೃದಯ ಪ್ರೀತಿಯಿರಬೇಕು, ಸತ್ಯ ಹಾಗೂ ನಿಸ್ವಾರ್ಥವಾಗಿರಬೇಕು. ಯಾವಾಗ ನನ್ನ ಬಾಬಾ, ಪ್ರಿಯವಾದ ಬಾಬಾ ಎನ್ನುತ್ತೀರಿ, ಅಂದಾಗ ಪ್ರೀತಿಯನ್ನೆಂದಿಗೂ ಮರೆಯಲು ಸಾಧ್ಯವಿಲ್ಲ ಮತ್ತು ನಿಸ್ವಾರ್ಥ ಪ್ರೀತಿಯು ತಂದೆಯಿಂದಲ್ಲದೆ ಮತ್ತ್ಯಾವುದೇ ಆತ್ಮನಿಂದ ಸಿಗಲು ಸಾಧ್ಯವಿಲ್ಲ. ಆದ್ದರಿಂದ ಎಂದಿಗೂ ಸಹ ತೋರ್ಪಡಿಕೆಯ ನೆನಪು ಮಾಡಬಾರದು, ನಿಸ್ವಾರ್ಥ ಪ್ರೀತಿಯಲ್ಲಿ ಲವಲೀನವಾಗಿರಿ.